**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಿದ್ದಾಪುರ**

**ಉಪಸ್ಥಿತರು**

**ಶ್ರೀ ತಿಮ್ಮಯ್ಯ ಜಿ.**

**ಬಿ.ಎ. ಎಲ್.ಎಲ್.ಬಿ.**

ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,

ಸಿದ್ದಾಪುರ

**ದಿನಾಂಕಃ 19 ನೇ ಸೆಪ್ಟೆಂಬರ್ 2022 ನೇ ಇಸವಿ**

**ಅಸಲು ದಾವೆ ಸಂಖ್ಯೆ 37/2020**

**ವಾದಿಃ** **ಮಾಧವ ತಿಮ್ಮಪ್ಪ ಹೆಗಡೆ**

**(ಪ್ರತಿನಿಧಿಸುವವರು ಶ್ರೀ ಆರ್ ಎಸ್ ಹೆಚ್ ., ನ್ಯಾಯವಾದಿಗಳು)**

**ವಿರುದ್ಧ**

**ಪ್ರತಿವಾದಿಯರುಃ** **ಉಮೇಶ ಮಂಜಾ ಗೌಡ**

**(ಪ್ರತಿನಿಧಿಸುವವರು ಶ್ರೀ. ಎನ್ ವೈ ಎ . ನ್ಯಾಯವಾದಿಗಳು.)**

**ಅರ್ಜಿದಾರಃ** **ಮಾಧವ ತಿಮ್ಮಪ್ಪ ಹೆಗಡೆ**

ವಿರುದ್ಧ

**ಎದುರುದಾರರುಃ** **ಉಮೇಶ ಮಂಜಾ ಗೌಡ**

**:: ಮಧ್ಯಂತರ ಅರ್ಜಿ ಸಂಖ್ಯೆ IV ::**

**ಸಿವಿಲ್ ಪ್ರಕ್ರಿಯೆ ಸಂಹಿತೆ ಕ್ರಮಾದೇಶ VI, ನಿಯಮ 17, ಸಹವಾಚಕ ಕಲಂ 151 ರ ಮೇಲಿನ**

**ಆದೇಶ**

ವಾದಿ ಅರ್ಜಿಯ ಜೊತೆಯಲ್ಲಿ ಲಗತ್ತುಪಡಿಸಿರುವ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನೊಳಗೊಂಡು, ಸದರಿ ಮಧ್ಯಂತರ ಅರ್ಜಿಯ ಷೆಡ್ಯೂಲ್‌ನಲ್ಲಿ ಹೇಳಿರುವ ಉದ್ದೇಶಿತ ತಿದ್ದುಪಡಿಯನ್ನು ಮಾಡುವುದು ಅವಶ್ಯವಾಗಿರುತ್ತದೆ ಎಂದು ಕೋರಿ, ಅರ್ಜಿದಾರ ಸದರಿ ಅರ್ಜಿಯನ್ನು ಸಲ್ಲಿಸಿ, ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

2. **ವಾದ ಪತ್ರದಲ್ಲಿನ ಉದ್ದೇಶಿತ ತಿದ್ದುಪಡಿಯ ವರ್ಣನೆಃ**

ದಾವೆಯ ಪ್ಯಾರಾ 4 ರ ನಂತರ 4 ಎ ಈ ಕೆಳಗಿನಂತೆ ತಿದ್ದುಪಡಿಯಾಗಬೇಕು .

" ಪ್ಯಾರಾ 4(ಎ) ಪ್ರತಿವಾದಿ ದಾವಾಸ್ತಿ ಕಾಲುದಾರಿಯನ್ನು ಪ್ರತಿವಾದಿಯ ಬಾಬ್ತು ಸ ನಂ 27/1 ರ ಪ್ರಾರಂಭದಲ್ಲಿ ನ್ಯಾಯಾಲಯದ ತಾತ್ಕಾಲಿಕ ನಿರ್ಬಂಕಾಜ್ಞೆ ಆದೇಶ ಪ್ರತಿವಾದಿಯ ಪೂರ್ಣ ತಿಳುವಳಿಕೆಯಲ್ಲಿ ಇದ್ದರೂ ಸಹ ಪ್ರತಿವಾದಿ ದಿಃ 01-05-2020 ರಂದು ದಾವಾ ಬಿ ಸಿ ಕಾಲುದಾರಿಯನ್ನು ಸ ನಂ 27/1 ರ ಪ್ರಾರಂಭದಲ್ಲಿ ಬೇಲಿ ಕಂಬ ಹಾಗೂ ಮುಳ್ಳು ತಂತಿ ಮೂಲಕ ದಾವಾ ದಾಖಲ್ಪಡಿಸಿದ ನಂತರ ಬೇಲಿ ನಿರ್ಮಿಸಿ ಕಾಲದಾರಿ ಬಂದ್ ಮಾಡಿದ್ದು ಇರುತ್ತದೆ . ಈ ರೀತಿ ಮಾಡಲು ಪ್ರತಿವಾದಿಗೆ ಹಕ್ಕು ಇರುವುದಿಲ್ಲ. ಪ್ರತಿವಾದಿ ದಾವಾಸ್ತಿ ಕಾಲುದಾರಿಯನ್ನು ಈ ಹಿಂದಿನಂತೆ ವಾದಿಯ ಮಾಲ್ಕಿಕ್ಷೇತ್ರಗಳಿಗೆ ಓಡಾಡಲು ಮುಕ್ತವಾಗಿಡಲು ಜವಾಬ್ದಾರನಾಗಿರುತ್ತಾನೆ. ದಾವಾ ವಾದಪತ್ರದ 8 ನೇಪ್ಯಾರಾದ a) ಪ್ಯಾರಾದ ನಂತರ a1) ಎಂದು ಸೇರಿಸುವುದು.

ಪ್ರತಿವಾದಿ ದಿಃ 01-05-2021 ರಂದು ದಾವಾ **ಬಿ, ಸಿ** ಕಾಲುದಾರಿಯನ್ನು ಸ ನಂ 27/1 ರ ಪ್ರಾರಂಭದಲ್ಲಿ ಬೇಲಿ ಕಂಬ ಹಾಗೂ ಮುಳ್ಳು ತಂತಿ ಮೂಲಕ ಬೇಲಿ ನಿರ್ಮಿಸಿ ಕಾಲುದಾರಿ ಬಂದ್ ಮಾಡಿರುವುದನ್ನು ಮೆಂಡೆಂಟರಿ ಇಂಜೆಕ್ಷನ್ ಮೂಲಕ ತೆರವುಗೊಳಿಸಲು ಸೂಕ್ತ ನಿರ್ದೇಶನ ನೀಡಲು ಒಂದೊಮ್ಮೆ ಪ್ರತಿವಾದಿ ನ್ಯಾಯಾಲಯದ ಆದೇಶದಂತೆ ತೆರವುಗೊಳಿಸದಿದ್ದಲ್ಲಿ ನ್ಯಾಯಾಲಯದ ನಿಯೋಗಿ ಮೂಲಕ ತೆರವುಗೊಳಿಸಲು ಸೂಕ್ತ ಆದೇಶವಾಗಲು ಬೇಡಿಕೆ ಇದೆ .

3. **<u>ವಾದಿಯು ಸದರಿ ಅರ್ಜಿಯೊಂದಿಗಿನ ಶಪಥ ಪತ್ರದಲ್ಲಿ ಪ್ರತಿಪಾದಿಸುವುದೇನೆಂದರೆಃ-</u>**

ವಾದಿಯು ಈ ದಾವೆಯನ್ನು ದಾವಾ ವಾದಪತ್ರದ ಲಗತ್ತು ಹಾಜರುಪಡಿಸಿದ ನಕಾಶೆಯಲ್ಲಿ ಕಾಣಿಸಿದ **ಬಿ, ಸಿ** ಕಾಲುದಾರಿಯನ್ನು ಈ ಹಿಂದಿನಂತೆ ಓಡಾಡಲು ಪ್ರತಿವಾದಿ ಅಥವಾ ಅವರ ಕಡೆಯವರು ಯಾವುದೇ ರೀತಿ ಅಡ್ಡಿ ಆತಂಕಪಡಿಸದಂತೆ ಶಾಶ್ವತ ನಿರ್ಬಂಕಾಜ್ಞೆ ಆದೇಶ ಕೋರಿ ದಾವೆ ದಾಖಲ್ಪಡಿಸಿದ್ದು ಇರುತ್ತದೆ . ಈ ದಾವೆ ದಾಖಲ್ಪಡಿಸಿದ ನಂತರ ನ್ಯಾಯಾಲಯದ ತಾತ್ಕಾಲಿಕ ಮನಾಯಿ ಆದೇಶ ಉಲ್ಲಂಘನೆ ಮಾಡಿ ದಿಃ01-05-2021 ರಂದು ಪ್ರತಿವಾದಿ **ಬಿ , ಸಿ** ಕಾಲುದಾರಿಯನ್ನು ತನ್ನ ಸ ನಂ 27/1 ರ ಪ್ರಾರಂಭದಲ್ಲಿ ಬಂದ್ ಮಾಡಿದ್ದು ಇರುತ್ತದೆ. ತಾನು ಪ್ರತಿವಾದಿ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದ ಸಂಬಂಧ ಸಹ ಅರ್ಜಿ ಸಲ್ಲಿಸಿದ್ದು , ಅದು ಈಗ ವಿಚಾರಣೆಯಲ್ಲಿರುತ್ತದೆ . ದಾವಾ ದಾಖಲ್ಪಡಿಸಿದ ನಂತರ ಪ್ರತಿವಾದಿ ಈ ಮೇಲಿನಂತೆ ಅಪಕೃತ್ಯ ನಡೆಸಿದ್ದರಿಂದ ದಾವೆಯನ್ನು ಸಹ ಅರ್ಜಿಯಲ್ಲಿ ಕೋರಿರುವಂತೆ ಸೂಕ್ತ ತಿದ್ದುಪಡಿ ಮಾಡಿಕೊಳ್ಳುವುದು ಅನಿವಾರ್ಯವಾದುದರಿಂದ ಲಗತ್ತು ಅರ್ಜಿ ನೀಡಿದ್ದು , ಅರ್ಜಿಯಲ್ಲಿ ಕೇಳಿದಂತೆ ಸೂಕ್ತ ಆದೇಶವಾಗಲು ಬೇಡಿಕೆ ಇದೆ. ಆದುದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಘನ ನ್ಯಾಯಾಲಯದಲ್ಲಿ ಕೇಳಿಕೊಂಡಿರುತ್ತಾರೆ.

4. ಪ್ರತಿಯಾಗಿ ಸದರಿ ಮಧ್ಯಂತರ ಅರ್ಜಿಯಲ್ಲಿನ ಅಂಶಗಳನ್ನು ಅಲ್ಲಗಳೆಯುತ್ತಾ, ಸದರಿ ಅರ್ಜಿಗೆ ವಿರುದ್ಧವಾಗಿ ಪ್ರತಿವಾದಿಯು ಮೌಖಿಕವಾಗಿ ತಕರಾರು ಇರುತ್ತದೆಂದು ಈ ಕೆಳಗಿನಂತೆ ಪ್ರತಿಪಾದಿಸಿರುತ್ತಾರೆ.

ವಾದಿಯ ಸಲ್ಲಿಸಿರುವ ಸದರಿ ಮಧ್ಯಂತರ ಅರ್ಜಿ ಸಾಕಷ್ಟು ತಡವಾಗಿ ಸಲ್ಲಿಸಿದ್ದು, ಮುಂದುವರೆದು, ದಾವಾ ಸ್ವತ್ತಿನಲ್ಲಿ ವಾದಿ ತನ್ನ ಹಾತ್ ನಕಾಶೆಯಲ್ಲಿ ಕಚ್ಚಾ ನಕಾಶೆಯಲ್ಲಿ

ತೋರಿಸಿರುವಂತೆ ಸ ನಂ 27/1 ರಲ್ಲಿ ಯಾವುದೇ ಕಾಲುದಾರಿ ಇಲ್ಲದೆ ಇದ್ದರೂ ಸಹ ಕಾಲು ದಾರಿ ಇರುತ್ತದೆ ಅದನ್ನು ಬಂದ್ ಮಾಡಿರುತ್ತಾರೆಂದು ಹೇಳಿರುವ ಅಂಶವು ಸುಳ್ಳಿನಿಂದ ಕೂಡಿದ್ದು , ವಾದಿಯು ಹಾಜರುಪಡಿಸಿರುವ ಉದ್ದೇಶಿತ ತಿದ್ದುಪಡಿಯಿಂದ ದಾವೆಯ ಸ್ವರುಪ ಮತ್ತು ವ್ಯಾಜ್ಯ ಕಾರಣ ಬದಲಾಗುತ್ತದೆ. ಆದ್ದರಿಂದ ವಾದಿಯು ಸಲ್ಲಿಸಿರುವ ಸದರಿ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೋರಿರುತ್ತಾರೆ .

5. ಸದರಿ ಮಧ್ಯಂತರ ಅರ್ಜಿಯನ್ನು ತೀರ್ಮಾನಿಸಲು ಈ ನ್ಯಾಯಾಲಯಕ್ಕೆ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

1. ಅರ್ಜಿದಾರನು ತಾನು ಸಲ್ಲಿಸಿರುವ ಉದ್ದೇಶಿತ ತಿದ್ದುಪಡಿಯಿಂದ ದಾವೆಯ ಸ್ವರೂಪ ಮತ್ತು ವ್ಯಾಜ್ಯ ಕಾರಣ ಬದಲಾಗುವುದಿಲ್ಲವೆಂದು ರುಜುವಾತುಪಡಿಸುತ್ತಾರೆಯೇ?
2. ಅರ್ಜಿದಾರನು ತಾನು ಸಲ್ಲಿಸಿರುವ ಮಧ್ಯಂತರ ಅರ್ಜಿಯು ಪುರಸ್ಕರಿಸಲು ಅರ್ಹರಾಗಿರುತ್ತಾರೆಂದು ರುಜುವಾತುಪಡಿಸುತ್ತಾರೆಯೇ?
3. ಯಾವ ಆದೇಶ?

6. ಉಭಯ ಪಕ್ಷಗಾರರ ಪರ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು.

7. ಮಧ್ಯಂತರ ಅರ್ಜಿಯಲ್ಲಿನ ಅಂಶಗಳೊಂದಿಗೆ, ವಾದಪತ್ರ ಮತ್ತು ಇದಕ್ಕೆ ಪೂರಕವಾಗಿ ವಾದಿಯು ಹಾಜರುಪಡಿಸಿರುವ ದಾಖಲೆಗಳು ಹಾಗೂ ಇತರೆ ಸಂಗತಿಗಳನ್ನು ಪರಿಶೀಲಿಸಿ ಈ ನ್ಯಾಯಾಲಯವು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಗಿನಂತೆ ಉತ್ತರಿಸಿದೆ.

ಅಂಶ 1 ಮತ್ತು 2: ಸಕಾರಾತ್ಮಕವಾಗಿ,
ಅಂಶ 3: ಅಂತಿಮ ಆದೇಶದಂತೆ, ಈ ಕೆಳಗಿನ ಕಾರಣಗಳಿಗಾಗಿ,

## <u>ಕಾ ರ ಣ ಗ ಳು</u>

8. **<u>ಅಂಶ 1 ಮತ್ತು 2:</u>** ಸದರಿ ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಪುನಾರವರ್ತನೆ ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಮುಂದುವರೆದು, ಸದರಿ ಮಧ್ಯಂತರ ಅರ್ಜಿಯಲ್ಲಿನ ಹಾಗೂ ಲಿಖಿತ ತಕರಾರಿನ ಅಂಶಗಳನ್ನು ಸದರಿ ಆದೇಶದ ಆರಂಭದಲ್ಲೇ ವಿವರಿಸಲ್ಪಟ್ಟಿರುವುದರಿಂದ, ಸದರಿ ಅರ್ಜಿಯಲ್ಲಿನ ಹಾಗೂ ತಕರಾರಿನಲ್ಲಿನ ಅಂಶಗಳ ಪುನರಾವರ್ತನೆ ತಪ್ಪಿಸುವ ಸಲುವಾಗಿ ಮತ್ತೊಮ್ಮೆ, ಈ ಸಂದರ್ಭದಲ್ಲಿ ಸದರಿ ಅಂಶಗಳನ್ನು ಪುನರ್ ಪ್ರಸ್ತಾಪಿಸಿರುವುದಿಲ್ಲ.

9. ವಾದಿಯು ಪ್ರತಿವಾದಿಯ ವಿರುದ್ಧ ವಾದಿ ದಾವಾಸ್ವತ್ತಿನಲ್ಲಿನ **ಬಿ, ಸಿ** ಕಾಲುದಾರಿಯಲ್ಲಿ

ಹಿಂದಿನಂತೆ ವಾದಿಯು ಓಡಾಡಲು ಪ್ರತಿವಾದಿ ಮತ್ತು ಅವರ ಕಡೆಯವರು ಅಡ್ಡಿ ಆತಂಕಪಡಿಸದಂತೆ ಸದರಿಯವರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಪರಿಹಾರ ನೀಡಬೇಕೆಂದು ದಾವೆ ಸಲ್ಲಿಸಿದ್ದು , ಸದರಿ ದಾವೆ ಚಾಲ್ತಿಯಲ್ಲಿದ್ದ ಸಂದರ್ಭದಲ್ಲಿ ಅಂದರೆ, ವಾದಿಯ ಸಾಕ್ಷ್ಯ ವಿಚಾರಣೆ ಕಾಲದಲ್ಲಿ , ಪ್ರಸ್ತುತ ಅರ್ಜಿಯನ್ನು ದಾಖಲಿಸಿ ದಾವಾ ಸ್ವತ್ತಿನಲ್ಲಿ ಪ್ರಸ್ತುತ ದಾವೆ ಚಾಲ್ತಿಯಲ್ಲಿರುವಾಗಲೇ, ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ದಿಃ 01-05-2021 ರಂದು **ಬಿ, ಸಿ** ಕಾಲುದಾರಿಯನ್ನು ಸ ನಂ 27/1ರ ಪ್ರಾರಂಭದಲ್ಲಿ ಬೇಲಿ ಕಂಬ ನಿರ್ಮಿಸಿ ಮುಳ್ಳು ತಂತಿ ಹಾಕಿ ಕಾಲುದಾರಿ ಬಂದ್ ಮಾಡಿರುತ್ತಾರೆ , ಸದರಿ ಅನಧೀಕೃತವಾಗಿ ಪ್ರತಿವಾದಿ ಕಟ್ಟಿದ ದಿಃ 01-05-2021 ರಂದು **ಬಿ , ಸಿ** ಕಾಲುದಾರಿಯನ್ನು ಸ ನಂ 27/1ರ ಪ್ರಾರಂಭದಲ್ಲಿ ಬೇಲಿ ಕಂಬ ನಿರ್ಮಿಸಿ ಮುಳ್ಳು ತಂತಿ ಹಾಕಿ ಬೇಲಿ ನಿರ್ಮಿಸಿದ ಕಾಲುದಾರಿಯನ್ನು ತೆರವುಗೊಳಿಸುವಂತೆ ಹಾಗೂ ಸದರಿ ಪರಿಹಾರದ ಅಂಶವು ವಾದ ಪತ್ರದಲ್ಲಿ ತಿದ್ದುಪಡಿಯಾಗುವಂತೆ ಕೋರಿ ಸದರಿ ತಿದ್ದುಪಡಿ ಅರ್ಜಿಯನ್ನು ಸಲ್ಲಿಸಿರುತ್ತಾರೆ .

10. ವಾದಿಯು ಸದರಿ ಅರ್ಜಿಯಲ್ಲಿನ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ, ಸದರಿ ಅರ್ಜಿಯಲ್ಲಿನ ಪ್ರಮಾಣಪತ್ರದಲ್ಲಿನ ಅಂಶಗಳೊಂದಿಗೆ ವಾದಿಯ ಪರ ನ್ಯಾಯವಾದಿಗಳು ತಮ್ಮ ವಾದವನ್ನು ಮಂಡಿಸಿದ್ದು, ಸದರಿ ದಾವಾ ಸ್ವತ್ತಿನಲ್ಲಿ ಪ್ರತಿವಾದಿಯು ಪ್ರಸ್ತುತ ದಾವೆ ಚಾಲ್ತಿಯಲ್ಲಿರುವಾಗಲೇ, ದಿಃ 01-05-2021 ರಂದು **ಬಿ , ಸಿ** ಕಾಲುದಾರಿಯನ್ನು ಸ ನಂ 27/1ರ ಪ್ರಾರಂಭದಲ್ಲಿ ಬೇಲಿ ಕಂಬ ನಿರ್ಮಿಸಿ ಮುಳ್ಳು ತಂತಿ ಹಾಕಿ ಬೇಲಿ ನಿರ್ಮಿಸಿದ ಕಾಲುದಾರಿ ತೆರವುಗೊಳಿಸುವುದು ದಾವೆಯ ಇತ್ಯರ್ಥಕ್ಕೆ ಅವಶ್ಯವಿರುತ್ತದೆ. ಆದ್ದರಿಂದ, ಸದರಿ ತಿದ್ದುಪಡಿ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಅರ್ಜಿದಾರರ ಪರ ನ್ಯಾಯವಾದಿಗಳು ತಮ್ಮ ವಾದ ಮಂಡಿಸಿರುತ್ತಾರೆ.

ಸದರಿ ಅರ್ಜಿದಾರರ ಪ್ರತಿಪಾದನೆಗೆ ಪ್ರತಿಯಾಗಿ ಪ್ರತಿವಾದಿ ಪರ ನ್ಯಾಯವಾದಿಗಳು, ಸದರಿ ಅರ್ಜಿಯಲ್ಲಿನ ಉದ್ದೇಶಿತ ತಿದ್ದುಪಡಿಯನ್ನು ಪ್ರಬಲವಾಗಿ ಅಲ್ಲಗಳೆದು, ಸದರಿ ತಿದ್ದುಪಡಿಯು ಕಾಲವಿಳಂಬದಿಂದ ಕೂಡಿದ್ದು, ದಾವೆಯ ಸ್ವರೂಪ ಮತ್ತು ವ್ಯಾಜ್ಯ ಕಾರಣ ಬದಲಾಗುತ್ತದೆ. ಹಾಗೂ ಸದರಿ ಅರ್ಜಿಯು ಯಾವುದೇ ಸಕಾರಣ ಮತ್ತು ಸದ್ಭಾವನೆ ಹೊಂದಿ ಸಲ್ಲಿಸಿದ್ದಾಗಿರುವುದಿಲ್ಲ. ಸದರಿ ಅರ್ಜಿಯು ಕಾನೂನು ರೀತಿ ಪರಿಗಣಿಸಲು ಸಾಧ್ಯವಿರುವುದಿಲ್ಲ. ಆದ್ದರಿಂದ ಸದರಿ ಅರ್ಜಿಯನ್ನು ಖರ್ಚು ಸಹಿತ ವಜಾಮಾಡಬೇಕೆಂದು ಪ್ರತಿಪಾದಿಸಿರುತ್ತಾರೆ .

11. ಸದರಿ ಈ ಮೇಲಿನ ಉಭಯತ್ರರ ನ್ಯಾಯವಾದಿಗಳ ವಾದ ಮಂಡನೆಯನ್ನು ಹಾಗೂ ಸದರಿ ಪ್ರಕರಣದ ಲಭ್ಯವಿರುವ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಯಿತು. ವಾದಿ ಸದರಿ ದಾವೆಯನ್ನು ಪ್ರತಿವಾದಿಯ ವಿರುದ್ಧ ವಾದಿ ದಾವಾಸ್ವತ್ತಿನಲ್ಲಿನ **ಬಿ, ಸಿ** ಕಾಲುದಾರಿಯಲ್ಲಿ ಹಿಂದಿನಂತೆ ವಾದಿಯು ಓಡಾಡಲು ಪ್ರತಿವಾದಿ ಮತ್ತು ಅವರ ಕಡೆಯವರು ಅಡ್ಡಿ ಆತಂಕಪಡಿಸದಂತೆ ಸದರಿಯವರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಪರಿಹಾರ ನೀಡಬೇಕೆಂದು ದಾವೆ ಸಲ್ಲಿಸಿದ್ದು , ಸದರಿ ದಾವೆ ಚಾಲ್ತಿಯಲ್ಲಿದ್ದ ಸಂದರ್ಭದಲ್ಲಿ, ಅಂದರೆ , ವಾದಿಯ ಸಾಕ್ಷ್ಯ ವಿಚಾರಣೆ ಕಾಲದಲ್ಲಿ ಪ್ರಸ್ತುತ ಅರ್ಜಿಯನ್ನು ದಾಖಲಿಸಿ, ಪ್ರಸ್ತುತ ದಾವೆಯು ಚಾಲ್ತಿಯಲ್ಲಿದ್ದ ಸಂದರ್ಭದಲ್ಲಿ ಪ್ರತಿವಾದಿಯು ದಾವಾ ಸ್ವತ್ತನ್ನು ಒತ್ತುವರಿ

ಮಾಡಿ ಕಾಲುದಾರಿಯನ್ನು ನಿರ್ಮಿಸಿ, ಸದರಿ ಒತ್ತುವರಿಯಾದ ಬಗ್ಗೆ ನಮೂದಿಸಿ, ಸದರಿ ಒತ್ತುವರಿಯಾದ ಜಾಗವನ್ನು ತೆರವುಗೊಳಿಸಿ ಕೊಡಬೇಕೆಂದು ಪರಿಹಾರ ಕೋರಿ ಸದರಿ ಪರಿಹಾರ ಅಂಶವನ್ನು ವಾದ ಪತ್ರದಲ್ಲಿ ಪರಿಹಾರ ಕೋರಿರುವ ಪ್ಯಾರಾದಲ್ಲಿ ತಿದ್ದುಪಡಿಮಾಡುವಂತೆ ಕೋರಿರುತ್ತಾರೆ .

ಅದರಂತೆ ವಾದಿಯು ಸದರಿ ದಾವೆಯಲ್ಲಿ ತನ್ನ ಪರಿಹಾರಕ್ಕೆ ಸಂಬಂಧಿಸಿದಂತೆ ರುಜುವಾತಿನ ಜವಾಬ್ದಾರಿಯೊಂದಿಗೆ, ದಾವೆಯ ಇತ್ಯರ್ಥಕ್ಕೆ ಪೂರಕವಾಗಿ ಸದರಿ ತಿದ್ದುಪಡಿ ಕಲಂನಲ್ಲಿ ನೀಡಿರುವ ಅವಕಾಶಕ್ಕೆ ಸಂಬಂಧಿಸಿದಂತೆ ಅದರ ಸ್ಪಷ್ಟ ವಿವರಣೆಯ ಅಂಶಕ್ಕೆ ಒಳಪಟ್ಟು, ಸದರಿ ತಿದ್ದುಪಡಿಯ ಅರ್ಜಿಯನ್ನು ಸಕಾರಣಗಳೊಂದಿಗೆ ಸಲ್ಲಿಸಿದ್ದಾಗಿರುತ್ತದೆಯೇ ಎಂದು ಗಮನಿಸಬೇಕಾಗಿರುತ್ತದೆ. ಮುಂದುವರೆದು, ವಾದಿಯು ಕೋರಿರುವ ಉದ್ದೇಶಿತ ತಿದ್ದುಪಡಿಯು ದಾವಾ ಸ್ವತ್ತಿನ ಒತ್ತುವರಿಯಾದ ಕಾಲುದಾರಿಯ ಕ್ಷೇತ್ರವನ್ನು ತೆರವುಗೊಳಿಸುವ ಬಗ್ಗೆ ಸಂಬಂಧಿಸಿದ ವಿವರಣೆಯಾಗಿದ್ದು, ಸದರಿ ವಿವರಣೆಯು ದಾವೆಯನ್ನು ಸಂಪೂರ್ಣ ಮತ್ತು ಪರಿಣಾಮಕಾರಿಯಾಗಿ ಇತ್ಯರ್ಥಪಡಿಸಲು ಅವಶ್ಯವಿರುತ್ತದೆಯೇ? ಎಂದು ಸಹ ಗಮನಿಸಬೇಕಾಗಿರುತ್ತದೆ .

ಸದರಿ ಈ ಮೇಲೆ ಹೇಳಿದ ವಾದ ಪತ್ರ ಮತ್ತು ಪ್ರತಿವಾದ ಪತ್ರದಲ್ಲಿನ ಹಾಗೂ ಅರ್ಜಿಯಲ್ಲಿನ ಪ್ರತಿಪಾದಿತ ಅಂಶಗಳನ್ನು ಮತ್ತೊಮ್ಮೆ ಸೂಕ್ಷ್ಮವಾಗಿ ಗಮನಿಸುವುದಾದರೆ , ಸದರಿ ದಾವೆಯನ್ನು ವಾದಿ ಪ್ರತಿವಾದಿಯ ವಿರುದ್ಧ ತನ್ನ ವಾದ ಪತ್ರದಲ್ಲಿ ಪ್ರತಿಪಾದಿಸಿರುವ ಅಂಶಗಳ ರುಜುವಾತಿನ ಜವಾಬ್ದಾರಿಯೊಂದಿಗೆ ಪರಿಹಾರ ಕೋರಿ ಸಲ್ಲಿಸಿದ್ದು, ಇದರೊಂದಿಗೆ ಸದರಿ ದಾವೆಯಲ್ಲಿನ ಪ್ರತಿಪಾದಿತ ಅಂಶಗಳನ್ನು ವಾದಿಯೇ ರುಜುವಾತುಪಡಿಸುವ ಜವಾಬ್ದಾರಿಯನ್ನು ಸಹ ಹೊಂದಿರುತ್ತಾರೆ.

ಅದರಂತೆ , ಸದರಿ ಉದ್ದೇಶಿತ ತಿದ್ದುಪಡಿಯು ದಾವಾ ಸ್ವತ್ತಿನಲ್ಲಿ ಪ್ರತಿವಾದಿಯು ಒತ್ತುವರಿ ಮಾಡಿರುತ್ತಾರೆಂದು ಹೇಳುವ ಕ್ಷೇತ್ರ ಹಾಗೂ ಕಾಲುದಾರಿಯ ಸ್ಪಷ್ಟ ವಿವರಣೆ ಹಾಗೂ ಅದನ್ನು ತೆರವುಗೊಳಿಸುವ ಸಂಬಂದ ಪರಿಹಾರ ಕೋರಿದ್ದು ಅದರಂತೆ, ಸದರಿ ದಾವೆಯಲ್ಲಿ ವಾದಿಯು ತನ್ನ ಪರಿಹಾರಕ್ಕೆ ಪೂರಕವಾಗಿ ರುಜುವಾತುಪಡಿಸುವ ಜವಾಬ್ದಾರಿಯನ್ನು ಹೊಂದಿದ್ದು, ಅದರಂತೆ ಸದರಿ ದಾವೆಯ ಸಂಪೂರ್ಣ ಮತ್ತು ಪರಿಣಾಮಕಾರಿಯಾಗಿ ಇತ್ಯರ್ಥಪಡಿಸಲು ಅನುಕೂಲವಾಗುವಂತೆ ಹಾಗೂ ಜಾರಿಗೊಳಿಸಬಹುದಾದ ಆದೇಶದ ಉದ್ದೇಶದೊಂದಿಗೆ ಗಮನಿಸುವುದಾದರೆ, ಸದರಿ ಉದ್ದೇಶಿತ ತಿದ್ದುಪಡಿಯು ಪ್ರಸ್ತುತ ದಾವೆಯು ಚಾಲ್ತಿಯಲ್ಲಿದ್ದಾಗ, ಪ್ರತಿವಾದಿಯು ದಾವಾ ಸ್ವತ್ತನ್ನು ಒತ್ತುವರಿ ಮಾಡಿ ದಿಃ 01-05-2021 ರಂದು ಬಿ ಸಿ ಕಾಲುದಾರಿಯನ್ನು ಸ ನಂ 27/1ರ ಪ್ರಾರಂಭದಲ್ಲಿ ಬೇಲಿ ಕಂಬ ನಿರ್ಮಿಸಿ ಮುಳ್ಳು ತಂತಿ ಹಾಕಿ ಬೇಲಿ ನಿರ್ಮಿಸಿದ ಕಾಲುದಾರಿ ನಿರ್ಮಿಸಿದ್ದು, ಈ ಸಂಬಂಧ ವಾದಿಯು ದಿಃ 28-03-2022 ರಂದು ಪ್ರತಿವಾದಿ ದಾವಾ ಸ್ವತ್ತಿನ ದಾರಿಯಲ್ಲಿ ಓಡಾಡಲು ತೊಂದರೆ ಕೊಡಬಾರದು ಎಂದು ಈ ನ್ಯಾಯಾಲಯದ ಮಧ್ಯಂತರ ಆದೇಶ ಇದ್ದರೂ ಸಹ, ಒತ್ತುವರಿ ಮಾಡಿ ಮುಳ್ಳು ತಂತಿ ಬೇಲಿ ನಿರ್ಮಿಸಿ ಕಾಲು ದಾರಿ ಬಂದ್ ಮಾಡಿರುತ್ತಾರೆಂದು ಸಿ ಪಿ ಸಿ ಕ್ರಮಾದೇಶ 39 ನಿಯಮ 2(ಎ)ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಪ್ರತಿವಾದಿಯರ ವಿರುದ್ದ ಸದರಿ ಮಧ್ಯಂತರ ಆದೇಶದ ಉಲ್ಲಂಘನೆ ಸಂಬಂಧ ಸೂಕ್ತ ಕ್ರಮಕ್ಕೆ ಅರ್ಜಿಯನ್ನು ಸಲ್ಲಿಸಿದ್ದು, ಇದರೊಂದಿಗೆ, ಪ್ರತಿವಾದಿ ದಾವೆ ಚಾಲ್ತಿಯಲ್ಲಿರುವ ಸಂದರ್ಬದಲ್ಲೇ ದಾವಾ ಸ್ವತ್ತಿನಲ್ಲಿ ಒತ್ತುವರಿ ಮಾಡಿ ಬೇಲಿ ನಿರ್ಮಿಸಿರುತ್ತಾರೆಂದು ಅಂದರೆ , ಸದರಿ ತಿದ್ದುಪಡಿ ಅರ್ಜಿಯಲ್ಲಿ ಹೇಳಿರುವಂತೆ ದಿಃ 01-05-2021 ರಂದುಬಿ ಸಿ

ಕಾಲುದಾರಿಯನ್ನು ಸ ನಂ 27/1ರ ಪ್ರಾರಂಭದಲ್ಲಿ ಬೇಲಿ ಕಂಬ ನಿರ್ಮಿಸಿ ಮುಳ್ಳು ತಂತಿ ಹಾಕಿ ಬೇಲಿ ನಿರ್ಮಿಸಿದ ಕಾಲುದಾರಿ ನಿರ್ಮಿಸಿದ್ದು ಈ ಸಂಬಂಧ ಪೂರಕ ಪರಿಹಾರವು ಸದರಿ ದಾವೆಯ ಸಂಪೂರ್ಣ ಮತ್ತು ಪರಿಣಾಮಕಾರಿಯ ಚರ್ಚೆ ಮತ್ತು ತೀರ್ಮಾನಕ್ಕೆ ಪೂರಕವಾಗಿದ್ದು, ಆ ನಿಟ್ಟಿನಲ್ಲಿ ಸದರಿ ಉದ್ದೇಶಿತ ತಿದ್ದುಪಡಿಯ ಅವಶ್ಯಕತೆಯನ್ನು ಗಮನಿಸಬಹುದಾಗಿದೆ .

ಈ ಮೇಲಿನ ಚರ್ಚೆಯಂತೆ ಸದರಿ ಪ್ರಸ್ತುತ ಅರ್ಜಿಯ ಉದ್ದೇಶಿತ ತಿದ್ದುಪಡಿಯ ಅಂಶವು ಈಗಾಗಲೇ ಮಧ್ಯಂತರ ಅರ್ಜಿ ಸಂಖ್ಯೆ 3 ರಲ್ಲಿ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಒತ್ತುವರಿ ಮಾಡಿ ದಿಃ 01-05-2021 ರಂದುಬಿ ಸಿ ಕಾಲುದಾರಿಯನ್ನು ಸ ನಂ 27/1ರ ಪ್ರಾರಂಭದಲ್ಲಿ ಬೇಲಿ ಕಂಬ ನಿರ್ಮಿಸಿ ಮುಳ್ಳು ತಂತಿ ಹಾಕಿ ಬೇಲಿ ನಿರ್ಮಿಸಿದ ಕಾಲುದಾರಿ ನಿರ್ಮಿಸಿರುವ ಬಗ್ಗೆ ಆರೋಪಿಸಿ ನ್ಯಾಯಾಲಯದ ಗಮನಕ್ಕೆ ತಂದಿದ್ದು, ಸದರಿ ಆರೋಪಿಸಲ್ಪಟ್ಟ ಒತ್ತುವರಿಯು ದಾವೆ ಚಾಲ್ತಿಯಲ್ಲಿರುವಾಗಲೇ ಆಗಿರುತ್ತದೆಂದು ಪ್ರತಿಪಾದಿಸಿರುವ ವಾದಿಯ ಅರ್ಜಿಯಲ್ಲಿನ ಅಂಶಗಳನ್ನು ಇದೇ ದಾವೆಯಲ್ಲಿ ಪರಿಗಣಿಸಬಹುದಾದ ಅಂಶವಾಗಿದ್ದು, ಸದರಿ ಉದ್ದೇಶಿತ ತಿದ್ದುಪಡಿಯಿಂದ ದಾವೆಯ ಸ್ವರೂಪ ಮತ್ತು ವ್ಯಾಜ್ಯ ಕಾರಣ ಬದಲಾಗುವುದಿಲ್ಲ. ಮುಂದುವರೆದು , ಸದರಿ ಒತ್ತುವರಿ ಕ್ಷೇತ್ರದ ತೆರವಿನ ಸಂಬಂಧ ವಾದಿಯು ಅದರ ರುಜುವಾತಿನ ಭಾರವನ್ನು ಹೊಂದಿದ್ದು, ಅದರೊಂದಿಗೆ ಪ್ರಸ್ತುತ ದಾವೆಯನ್ನು ತೀರ್ಮಾನಿಸಲು ಅವಶ್ಯವಿರುವ ಅಂಶವಾಗಿದ್ದು, ಇದರೊಂದಿಗೆ ಅರ್ಜಿಯಲ್ಲಿನ ಪ್ರತಿಪಾದಿತ ಅಂಶಗಳು ಸಕಾರಣಗಳನ್ನು ಹೊಂದಿದ್ದು, ಸದರಿ ಅಂಶಗಳನ್ನು ಆ ನಿಟ್ಟಿನಲ್ಲಿ ಪರಿಗಣಿಸಬಹುದಾಗಿದ್ದು, ಸದರಿ ಉದ್ದೇಶಿತ ತಿದ್ದುಪಡಿಯು ಪ್ರಸ್ತುತ ದಾವೆಯ ಸಂಪೂರ್ಣವಾದ ಮತ್ತು ಪರಿಣಾಮಕಾರಿಯಾದ ತೀರ್ಮಾನಕ್ಕೆ ಅವಶ್ಯವಿರುವ ಕಾರಣದಿಂದಲೂ ಹಾಗೂ ಮತ್ತೊಂದು ವ್ಯಾಜ್ಯವನ್ನು ತಪ್ಪಿಸುವ ಸಲುವಾಗಿಯೂ ಸಹಾ ಸದರಿ ಮಧ್ಯಂತರ ಅರ್ಜಿಯಲ್ಲಿನ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು, ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದಲೂ ಸ್ವೀಕಾರಾರ್ಹವಾಗಿರುತ್ತದೆ ಎಂದು ಪರಿಗಣಿಸಬಹುದಾಗಿರುತ್ತದೆ.

ಮುಂದುವರೆದು, ಯಾವ ಸಂದರ್ಭದಲ್ಲಿ ತಿದ್ದುಪಡಿ ಅರ್ಜಿಯನ್ನು ಪರಿಗಣಿಸಬಹುದಾಗಿರುತ್ತದೆ ಎಂಬ ಅಂಶವನ್ನು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ನಿರ್ಣಿತ ತೀರ್ಪುಗಳನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ಉದಾಹರಿಸಬಹುದಾಗಿದೆ. ಸದರಿ ನಿರ್ಣಿತ ತೀರ್ಪುಗಳೆಂದರೆ,

**Abdul Rehama V/s Mohamad Ruldu - (2012) 11 SCC 341.** ಸದರಿ ತೀರ್ಪಿನಲ್ಲಿ ಗೌರವಾನ್ವಿತ ನ್ಯಾಯಾಲಯವು ಈ ಕೆಳಗಿನಂತೆ ವಿಶ್ಲೇಷಿಸಿರುತ್ತದೆ.
"--- **amendment of plaint after commencement of trial to make clear and exquisite when nature of suit is not change is held permissible."**

ಮುಂದುವರೆದು, ಅದೇ ರೀತಿ ಮತ್ತೊಂದು ಗೌರವಾನ್ವಿತ ನ್ಯಾಯಾಲಯದ ನಿರ್ಣಿತ ತೀರ್ಪಾದ, ***Rajesh Kumar Agrval V/s K K Modi and other - AIR 2006 SC 1647,*** ಸದರಿ ತೀರ್ಪಿನಲ್ಲಿ ಈ ಕೆಳಗಿನಂತೆ ಅಭಿಪ್ರಾಯಿಸಿ ವಿಶ್ಲೇಷಿಸಿರುತ್ತದೆ. ***"That is Amendment of plaint - cause of action arose during pendency of suit - Proposed amendment not aimed to change basic structure of suit, but merely a change in the nature of relief claimed - Merits of the amendment sought to be incorporated are not to be***

***adjudged at the stage of allowing prayer for amendment."***

ಮುಂದುವರೆದು, ಸದರಿ ಈ ಮೇಲಿನ ಚರ್ಚೆಯ ಸಮರ್ಥನೆಗೆ ಪೂರಕವಾಗಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ನಿರ್ಣಿತ ತೀರ್ಪನ್ನು ಗೌರವಪೂರ್ವಕವಾಗಿ ಉದಾಹರಿಸುವುದಾದರೆ, ***Rajesh Kumar Agrval V/s K K Modi and other – AIR*** *2006* ***SC*** *1647, ಸದರಿ ತೀರ್ಪಿನಲ್ಲಿಯೂ ಸಹ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ಅಭಿಪ್ರಾಯಿಸಿ ವಿಶ್ಲೇಷಿಸಿರುತ್ತದೆ.*

> *"That is Amendment of plaint - cause of action arose during pendency of suit - Proposed amendment not aimed to change basic structure of suit, but merely a change in the nature of relief claimed - Merits of the amendment sought to be incorporated are not to be adjudged at the stage of allowing prayer for amendment."*

ಮುಂದುವರೆದು, ಈ ಮೇಲೆ ಚರ್ಚಿಸಿರುವಂತೆ, ಸದರಿ ಉದ್ದೇಶಿತ ತಿದ್ದುಪಡಿಯಂತೆ ಸದರಿ ದಾವಾ ಪರಿಹಾರದ ತಿದ್ದುಪಡಿಯಾಗುವುದರಿಂದ, ಈ ನ್ಯಾಯಾಲಯವು ಸದರಿ ದಾವೆಯನ್ನು ನಿರ್ಧರಿಸುವ ಸಂದರ್ಭದಲ್ಲಿ ಸಂಪೂರ್ಣವಾದ, ಪರಿಣಾಮಕಾರಿಯಾದ ಹಾಗೂ ಅಮಲ್ಜಾರಿಗೊಳಿಸಬಹುದಾದ ತೀರ್ಮಾನಕ್ಕೆ ಬರಲು ಅವಶ್ಯವಾದ ಅಂಶವಾಗಿರುವುದಲ್ಲದೆ, ಸದರಿ ದಾವೆಯಲ್ಲಿ ವಾದಿ ತನ್ನ ದಾವೆಯಲ್ಲಿ ಕೋರಿದ ಪರಿಹಾರಕ್ಕೆ ಸಂಬಂಧಿಸಿದಂತೆ ರುಜುವಾತುಪಡಿಸುವ ಹೊಣೆಗಾರಿಕೆ ಹೊಂದಿದ್ದು, ಅದರಂತೆ ವಾದಿಯ ತಮ್ಮ ಮೇಲಿನ ರುಜುವಾತಿನ ಭಾರವನ್ನು ರುಜುವಾತುಪಡಿಸಲು ಸದರಿ ಈ ಮೇಲಿನ ವಾದ ಪತ್ರದಲ್ಲಿನ ಉದ್ದೇಶಿತ ತಿದ್ದುಪಡಿಗೆ ಅವಕಾಶ ನೀಡುವುದು ಹಾಗೂ ಮತ್ತೊಂದು ವ್ಯಾಜ್ಯವನ್ನು ತಪ್ಪಿಸುವ ಸಲುವಾಗಿ, ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದಲೂ ಪರಿಗಣಿಸಬಹುದಾದ ಅಂಶವಾಗಿರುತ್ತದೆ.

12. ಮುಂದುವರೆದು, ವಾದಿಯು ತಡವಾಗಿ ಸಲ್ಲಿಸಿರುವ ಸದರಿ ಅರ್ಜಿಗೆ ಸಂಬಂಧಿಸಿದಂತೆ, ತಡವಾಗಿ ಸಲ್ಲಿಸಿರುವ ಬಗ್ಗೆ ಅರ್ಜಿಯೊಂದಿಗಿನ ಪ್ರಾಮಾಣೀಕೃತ ಹೇಳಿಕೆಯಲ್ಲಿನ ಅಂಶವು ಸಕಾರಣದಿಂದ ಕೂಡಿದ್ದು, ಪರಿಗಣಿಸಬಹುದಾದ ಅಂಶಗಳಾಗಿರುತ್ತದೆ. ಆದ್ದರಿಂದ, ಅರ್ಜಿದಾರ ತಡವಾಗಿ ಅಂದರೆ, ಸದರಿ ವಾದಿಯ ಸಾಕ್ಷ್ಯ ವಿಚಾರಣೆ ಹಂತದಲ್ಲಿದ್ದು, ಇಂತಹ ಸಂದರ್ಭದಲ್ಲಿ ಸಲ್ಲಿಸಿರುವ ಸದರಿ ಅರ್ಜಿಯನ್ನು ಸೂಕ್ತ ವೆಚ್ಚ ಸಹಿತ ಈ ಮೇಲಿನ ಎಲ್ಲಾ ಕಾರಣಗಳನ್ನು ಪರಿಗಣಿಸಿ, ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದಲೂ ಅರ್ಜಿದಾರ ಸದರಿ ಮಧ್ಯಂತರ ಅರ್ಜಿಯು ಪುರಸ್ಕರಿಸಲು ಯೋಗ್ಯವಾಗಿರುತ್ತದೆ ಎಂದು ಅಭಿಪ್ರಾಯಿಸಿ, ಅಂಶ 1 ಮತ್ತು 2 ಕ್ಕೆ **ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

13. **ಅಂಶ 3**: ಈ ಮೇಲಿನ 1 ಮತ್ತು 2 ನೇ ಅಂಶಗಳಲ್ಲಿ ಚರ್ಚಿಸಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

:: **ಆದೇಶ** ::

ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ IV , ಸಿವಿಲ್

ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ VI, ನಿಯಮ 17, ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯನ್ನು ರೂ. 400/- ಖರ್ಚು ಸಹಿತ ಪುರಸ್ಕರಿಸಲಾಗಿದೆ .

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, 2022 ನೇ ಇಸವಿ ಸೆಪ್ಟೆಂಬರ್ 19 ನೇ ದಿನಾಂಕದಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

Sd/-

**ಸಿವಿಲ್ ನಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಿದ್ದಾಪುರ**